ವಿಷಯ : ಬ್ಯಾಡಗಿ ತಾಲ್ಲೂಕಿನಲ್ಲಿ ಕಳೆದ ಒಂದು ವರ್ಷದಲ್ಲಿ ನಿರ್ಮಾಣ ಮಾಡಲಾದ ಡಾಂಬರು ರಸ್ತೆಗಳ ಕುರಿತು

ಪ್ರ. ಸಂಖ್ಯೆ 563 (1463) ಶ್ರೀ ಹೆಗ್ಗಪ್ಪ (ಬ್ಯಾಡಗಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಬ್ಯಾಡಗಿ ತಾಲ್ಲೂಕಿನಲ್ಲಿ ಕಳೆದ ಒಂದು ವರ್ಷದಲ್ಲಿ ನಿರ್ಮಾಣ ಮಾಡಲಾದ ಡಾಂಬರು ರಸ್ತೆಯ ಉದ್ದವೆಷ್ಟು ;

ಆ) ಇದೇ ಅವಧಿಯಲ್ಲಿ ಬ್ಯಾಡಗಿ ತಾಲ್ಲೂಕಿನಲ್ಲಿ ನಿರ್ಮಾಣ ಮಾಡಲಾದ ಹೊಸ ರಸ್ತೆಯ ಉದ್ದವೆಷ್ಟು ;

ಇ) ಈವರೆಗೆ ಬ್ಯಾಡಗಿ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರು ಯಾವ ಯಾವ ರಸ್ತೆ ಕಾರ್ಯಕ್ಕಾಗಿ ಒಟ್ಟು ಎಷ್ಟು ಹಣ ಖರ್ಚು ಮಾಡಿದ್ದಾರೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) 3 ಕಿ.ಮಿ. ಉದ್ದ ಡಾಂಬರು ರಸ್ತೆ (ಹೊಸದು) ನಿರ್ಮಿಸಲಾಗಿದೆ. ಇದಲ್ಲದೆ 2.40 ಕಿ.ಮಿ. ರಸ್ತೆಗೆ ಮರು ಡಾಂಬರು ಹಾಕಲಾಗಿದೆ. (82-83ರ ಸಾಲಿನಲ್ಲಿ).

ಆ) ಮೇಲ್ಕಾಣಿಸಿದ ಅವಧಿಯಲ್ಲಿ 15.20 ಕಿ.ಮಿ. ಉದ್ದ ಹೊಸ ರಸ್ತೆ ನಿರ್ಮಾಣ ಮಾಡಲಾಗಿದೆ.

ಇ) 83-84ರ ಸಾಲಿನಲ್ಲಿ ಬ್ಯಾಡಕಿ ತಾಲ್ಲೂಕಿನಲ್ಲಿ ವಿವಿಧ ರಸ್ತೆ ಕಾಮಗಾರಿಗಳಿಗಾಗಿ (ಅಂದರೆ ಎಂ.ಎನ್.ಪಿ. ; ಐ ಸಿ.ಆರ್.ಪಿ. ಮಾಸ್ಟರ್ ಪ್ಲಾನ್ ; ಸಿ.ಡಿ. ವರ್ಕ್ಸ್ ಹರಿಜನವಾಡ ರಸ್ತೆ ನಿರ್ಮಾಣ ಅಭಿವೃದ್ಧಿ ಮತ್ತು ರಸ್ತೆ ನಿರ್ವಹಣೆ ಹಾಗೂ ದುರಸ್ತಿ ಇತ್ಯಾದಿ) ಒಟ್ಟು 9,52,080 ರೂಪಾಯಿಗಳನ್ನು ಫೆಬ್ರುವರಿ ಕೊನೆಯ ವೇಳೆಗೆ ಖರ್ಚು ಮಾಡಲಾಗಿದೆ.

ವಿಷಯ : ಸೇಡಂ ತಲ್ಲೂಕಿನಲ್ಲಿಯ ಗುಲ್ಬರ್ಗ-ಹೈದರಾಬಾದ್ (ಜಿ. ಕೆ. ರಸ್ತೆ) ದುರಸ್ತಿ ಕುರಿತು

ಪ್ರ. ಸಂಖ್ಯೆ 564 (1593) ಶ್ರೀ ನಾಗರೆಡ್ಡಿ ಲಚಮರೆಡ್ಡಿ ಪಾಟೀಲ್ (ಸೇಡಂ).—ಮಾನ್ಯ ಲೋಕೋಪಯೋಗ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ. ಸೇಡಂ ತಾಲ್ಲೂಕಿನಲ್ಲಿಯ ಗುಲ್ಬರ್ಗ-ಹೈದರಾಬಾದ್ ರಸ್ತೆಯು (ಜಿ.ಕೆ. ರಸ್ತೆ) ನಾಡು ರಸ್ತೆ ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ. ಈ ರಸ್ತೆಯ ದುರಸ್ತಿಗಾಗಿ ಕಳೆದ ಮೂರು ವರ್ಷಗಳಲ್ಲಿ ಸರ್ಕಾರದವರು ಖರ್ಚು ಮಾಡಿದ ಹಣದ ಮೊತ್ತವೆಷ್ಟು ;

ಇ. ಈ ರಸ್ತೆಯ ಮೇಲೆ ಪ್ರತಿ ದಿವಸ 10ರಿಂದ 15 ಟನ್‌ಗಳಷ್ಟು ತೂಕದ ಸಾಮಾನುಗಳನ್ನು ಹೊತ್ತು ಓಡಾಡುವ ವಾಹನ ಸಂಖ್ಯೆ ಎಷ್ಟು ;

ಈ. ಈ ರಸ್ತೆಯ ಸ್ಥಿತಿ ಸುಧಾರಿಸಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ. ಈ ರಸ್ತೆ ರಾಜ್ಯ ಹೆದ್ದಾರಿ ಎಂದು ಪರಿಗಣಿಸಲಾಗಿದೆ.

ಆ. 1980-81ರಿಂದ 82-83ರವರೆಗೆ 14.96 ಲಕ್ಷ ರೂ.ಗಳು ಖರ್ಚಾಗಿದೆ. 83-84ರಲ್ಲಿ ಫೆಬ್ರುವರಿ 84ರವರೆಗೆ 3.98 ಲಕ್ಷ ರೂ.ಗಳು ಖರ್ಚಾಗಿದೆ.

ಇ. 578 ವಾಹನಗಳು.

ಈ. ಈ ರಸ್ತೆಯ ಸುಧಾರಣೆಗಾಗಿ ಎರಡು ಕಾಮಗಾರಿಗಳನ್ನು 1983-84ನೇ ಸಾಲಿನ ಆಯವ್ಯಯದಲ್ಲಿ 24.275 ಲಕ್ಷ ರೂ.ಗಳ ಅಂದಾಜಿನಲ್ಲಿ ಸೇರಿಸಿದ್ದು ಟೆಂಡರ್ ಸಹಾ ಕರೆಯಲಾಗಿದ್ದು ಸಧ್ಯದಲ್ಲೇ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ವಿಷಯ : ಚಿಕ್ಕ ನೀರಾವರಿ ಕೆರೆಗಳ ನಿರ್ಮಾಣ ಹಾಗೂ ದುರಸ್ತಿ ಮಾಡುವುದು

ಪ್ರ. ಸಂಖ್ಯೆ 565 (1462) ಡಾ. ಹೆಗ್ಗಪ್ಪ (ಬ್ಯಾಡಗಿ) ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ. ಬ್ಯಾಡಗಿ ತಾಲ್ಲೂಕಿನಲ್ಲಿ ಸಣ್ಣ ನೀರಾವರಿಗೆ ಯೋಗ್ಯವಾಗಿರುವ ಕೆರೆಗಳ ಸಂಖ್ಯೆ ಎಷ್ಟು ;

ಆ. ಬ್ಯಾಡಗಿ ತಾಲ್ಲೂಕಿನಲ್ಲಿ ಕಳೆದ ವರ್ಷ ಸಣ್ಣ ನೀರಾವರಿಗಾಗಿ ವೆಚ್ಚ ಮಾಡಲಾದ ಹಣ ಎಷ್ಟು ;